1548 ಅ=72 (90
4R
23.06

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ.

### ಸೂಚನೆ:

**"ಕರ್ನಾಟಕ ಸರಕಾರವು 2018-19 ನೇ ಸಾಲಿನಲ್ಲಿ ರೈತರು ಪ್ರಾಥಮಿಕ ಸಹಕಾರ ಸಂಘಗಳ ಮೂಲಕ ಪಡೆದಿರುವ ಬೆಳೆ ಸಾಲಗಳ ಪೈಕಿ ರೂ.1 ಲಕ್ಷ ಮನ್ನಾ ಮಾಡಿದ್ದು, ವಿವಿಧ ಕಾರಣಗಳಿಂದ ಹಲವಾರು ಸಹಕಾರ ಸಂಘಗಳಲ್ಲಿ, ಕೆಲವೊಂದು ಅರ್ಹ ಬೆಳೆ ಸಾಲಗಾರ ರೈತರಿಗೆ ಸಾಲ ಮನ್ನಾ ಮೊತ್ತ ಇನ್ನೂ ಬಿಡುಗಡೆಯಾಗಿಲ್ಲ.**

**ಕಳೆದ ಆಯವ್ಯಯ ಮಂಡನೆ ಸಂದರ್ಭದಲ್ಲಿ ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಬೆಳೆ ಸಾಲದ ಮಿತಿಯನ್ನು 3 ಲಕ್ಷ ದಿಂದ 5 ಲಕ್ಷಕ್ಕೆ ಏರಿಸಲಾಗಿದೆ. ಈ ಬಗ್ಗೆ ಇನ್ನೂ ಸಹ ಸಂಬಂಧಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹೆಚ್ಚುವರಿ ಮಾಡಿರುವ ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಬೆಳೆ ಸಾಲವನ್ನು ನೀಡುತ್ತಿಲ್ಲ.**

**ಕೃಷಿ ಅಭಿವೃದ್ಧಿಗಾಗಿ ಶೇಕಡಾ 3% ರ ಬಡ್ಡಿ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು 10 ಲಕ್ಷ ದಿಂದ 15 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಆದರೆ ಯಾವುದೇ ಪ್ರಾಥಮಿಕ ಸಹಕಾರ ಸಂಘಗಳು 10 ಲಕ್ಷಕ್ಕಿಂತ ಜಾಸ್ತಿ ಸಾಲವನ್ನು ವಿತರಣೆ ಮಾಡುತ್ತಿಲ್ಲ.**

**ಸದರಿ ಈ ಎಲ್ಲಾ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ಸಿಗುವಂತೆ ಸರ್ಕಾರ ಅಗತ್ಯ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ".**

### ಮಾಹಿತಿ:

### 2018-19 ನೇ ಸಾಲಿನ ರೂ.1.00 ಲಕ್ಷ ಸಾಲ ಮನ್ನಾ ಯೋಜನೆ;

ರಾಜ್ಯದ ಸಹಕಾರ ಸಂಘಗಳಲ್ಲಿನ ಹಸಿರು ಪಟ್ಟಿ ರೈತರ ಪೈಕಿ ಬಾಕಿ ಇರುವ 31,003 ರೈತರಿಗೆ ರೂ. 167.51 ಕೋಟಿಗಳನ್ನು ಮತ್ತು ಅರ್ಹತೆ ಗುರುತಿಸಲು ಬಾಕಿ ಇರುವ ರೈತರಿಗೆ ಸಂಬಂಧಿಸಿದಂತೆ ರೂ.64.49 ಕೋಟಿ ಒಟ್ಟಾರೆ ಅಂದಾಜು ರೂ. 232 ಕೋಟಿಗಳಿಗೆ ಆಯವ್ಯಯ ಅವಕಾಶ ಕಲ್ಪಿಸಿ ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

ಉಳಿದ 13,334 ರೈತರ ಅರ್ಹತೆ ಗುರುತಿಸಲು ಸಾಲ ಮನ್ನಾ ತಂತ್ರಾಂಶದಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿ ಅರ್ಹ ರೈತರ ಪಟ್ಟಿ ನೀಡಲು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ರವರನ್ನು ಕೋರಲಾಗಿದೆ.

...2

**ಬೆಳೆ ಸಾಲದ ಮಿತಿಯನ್ನು ರೂ.3.00 ಲಕ್ಷದಿಂದ ರೂ.5.00 ಲಕ್ಷಕ್ಕೆ ಹೆಚ್ಚಿಸಿರುವ ಯೋಜನೆ:**

ಸರ್ಕಾರದ ಆದೇಶ ಸಂಖ್ಯೆ: ಸಿಒ 167 ಸಿಎಲ್ಎಸ್ 2023 ದಿನಾಂಕ: 08.09.2023 ರ ಆದೇಶದಲ್ಲಿ ಶೂನ್ಯ ಬಡ್ಡಿದರದಲ್ಲಿ ವಿತರಿಸುವ ಬೆಳೆ ಸಾಲದ ಮಿತಿಯನ್ನು ರೂ.3.00 ಲಕ್ಷದಿಂದ ರೂ.5.00 ಲಕ್ಷದವರೆಗೆ ಹೆಚ್ಚಿಸಲಾಗಿದೆ.

ಬೆಳೆ ಸಾಲವನ್ನು ರೈತರ ಭೂ ಹಿಡುವಳಿ ಮತ್ತು ಸ್ಕೇಲ್ ಆಫ್ ಫೈನಾನ್ಸ್ ಆಧಾರವಾಗಿ ಮಂಜೂರು ಮಾಡಬೇಕಿದ್ದು, ಕ್ರಮಿಕ ಪತ್ತಿನ ಮಿತಿಯನ್ವಯ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸ್ವಂತ ಬಂಡವಾಳ, ನಬಾರ್ಡ್ ಪುನರ್ಧನ ಮಿತಿ ಮತ್ತು ಈ ಹಿಂದೆ ರೈತರು ಪಡೆದ ಸಾಲದ ಮಿತಿಯನ್ನು ಆಧರಿಸಿ ಬೆಳೆ ಸಾಲವನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ವಿತರಿಸಲಾಗುತ್ತಿದೆ.

ನವೆಂಬರ್–2024 ರ ಅಂತ್ಯದವರೆಗೆ ಪ್ಯಾಕ್ಸ್‌ಗಳ ಮೂಲಕ 11,934 ರೈತರಿಗೆ ರೂ.535.83 ಕೋಟಿ ಬೆಳೆ ಸಾಲವನ್ನು ರೂ.3.00 ಲಕ್ಷದಿಂದ ರೂ.5.00 ಲಕ್ಷಗಳ ಮಿತಿಯಲ್ಲಿ ವಿತರಿಸಲಾಗಿದೆ.

2024–25 ನೇ ಸಾಲಿಗೆ ಸಹಕಾರ ಸಂಸ್ಥೆಗಳ ಮೂಲಕ 35.10 ಲಕ್ಷ ರೈತರಿಗೆ ರೂ.25,000 ಕೋಟಿಗಳ ಅಲ್ಪಾವಧಿ ಕೃಷಿ ಸಾಲ ವಿತರಿಸಿಲು ಗುರಿ ನಿಗದಿಪಡಿಸಿದ್ದು, ನಬಾರ್ಡ್ 2024–25 ನೇ ಸಾಲಿಗೆ ರಿಯಾಯಿತಿ ಬಡ್ಡಿ ದರದಲ್ಲಿ ನೀಡುವ ಅಲ್ಪಾವಧಿ ಸಾಲದ ಮಿತಿಯನ್ನು ಕರ್ನಾಟಕ ರಾಜ್ಯಕ್ಕೆ ಈ ಹಿಂದಿನ ಸಾಲಿಗೆ ಇದ್ದ ಮಿತಿ ರೂ.5600 ಕೋಟಿಗಳನ್ನು ಕಡಿಮೆ ಮಾಡಿ ರೂ.2340 ಕೋಟಿ ನಿಗದಿ ಮಾಡಿದೆ. ಇದರಿಂದಾಗಿ ಡಿಸಿಸಿ ಬ್ಯಾಂಕುಗಳ ಬಂಡವಾಳದ ಕೊರತೆಯಿಂದಾಗಿ ರೂ.3.00 ಲಕ್ಷಗಳವರೆಗಿನ ಸಾಲಗಳಿಗೆ ಮೊದಲ ಆದ್ಯತೆ ನೀಡುತ್ತಿದ್ದು, ಈ ಸದಸ್ಯರ ಬೇಡಿಕೆ ಪೂರ್ಣಗೊಂಡ ನಂತರ ರೈತರ ರೂ.3.00 ಲಕ್ಷದಿಂದ ರೂ. 5.00 ಲಕ್ಷಗಳವರೆಗಿನ ಸಾಲದ ಬೇಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ವಿತರಿಸಲು ಕ್ರಮವಹಿಸಲಾಗುವುದು.

**ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲದ ಮಿತಿಯನ್ನು ರೂ.10.00 ಲಕ್ಷದಿಂದ ರೂ.15.00 ಲಕ್ಷಕ್ಕೆ ಹೆಚ್ಚಿಸಿರುವುದು.**

ಸರ್ಕಾರದ ಆದೇಶ ಸಂಖ್ಯೆ: ಸಿಒ 167 ಸಿಎಲ್ಎಸ್ 2023 ದಿನಾಂಕ: 08.09.2023 ರ ಆದೇಶದಲ್ಲಿ ಶೇ.3% ಬಡ್ಡಿ ದರದಲ್ಲಿ ವಿತರಿಸುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಮಿತಿಯನ್ನು ರೂ.10.00 ಲಕ್ಷದಿಂದ ರೂ.15.00 ಲಕ್ಷದವರೆಗೆ ಹೆಚ್ಚಿಸಲಾಗಿದೆ.

...3

ನಬಾರ್ಡ್ ಪ್ರತಿ ಯೋಜನೆಗೆ ನಿಗದಿಪಡಿಸಿದ ಯುನಿಟ್ ಕಾಸ್ಟ್ ಮತ್ತು ಯೋಜನಾ ವೆಚ್ಚವನ್ನು ಆಧರಿಸಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸ್ವಂತ ಬಂಡವಾಳ, ನಬಾರ್ಡ್ ಪುನರ್ಧನ ಮಿತಿ ಆಧರಿಸಿ ಅವಧಿ ಸಾಲ ವಿತರಿಸಲಾಗುತ್ತದೆ.

ದಿನಾಂಕ:01-04-2024 ರಿಂದ ದಿನಾಂಕ: 31-10-2024 ರವರೆಗೆ ಶೇಕಡಾ 3 ರ ಬಡ್ಡಿ ದರದಲ್ಲಿ ರೂ.10.00 ಲಕ್ಷಗಳಿಗಿಂತ ಹೆಚ್ಚಿಗೆ ಒಟ್ಟು 372 ರೈತರಿಗೆ ಒಟ್ಟು ರೂ.61.85 ಕೋಟಿ ಸಾಲ ವಿತರಿಸಲಾಗಿದೆ.

2024-25 ನೇ ಸ಼ಾಲಿಗೆ ಸಹಕಾರ ಸಂಸ್ಥೆಗಳ ಮೂಲಕ 0.90 ಲಕ್ಷ ರೈತರಿಗೆ ರೂ.2000 ಕೋಟಿಗಳ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ ವಿತರಿಸಲು ಗುರಿ ನಿಗದಿಪಡಿಸಿದ್ದು, ಡಿಸಿಸಿ ಬ್ಯಾಂಕುಗಳ ಬಂಡವಾಳದ ಕೊರತೆಯಿಂದಾಗಿ ರೂ.10.00 ಲಕ್ಷಗಳವರೆಗಿನ ಸಾಲಗಳಿಗೆ ಮೊದಲ ಆದ್ಯತೆ ನೀಡುತ್ತಿದ್ದು, ಈ ಸದಸ್ಯರ ಬೇಡಿಕೆ ಪೂರ್ಣಗೊಂಡ ನಂತರ ರೈತರ ರೂ.10.00 ಲಕ್ಷಕ್ಕಿಂತ ಹೆಚ್ಚಿಗೆ ರೂ.15.00 ಲಕ್ಷಗಳವರೆಗಿನ ಸಾಲದ ಬೇಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ವಿತರಿಸಲು ಕ್ರಮವಹಿಸಲಾಗುವುದು.

**ಸಂಖ್ಯೆ: ಸಿಒ 321 ಸಿಎಲ್‌ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**